**<u>ಸಾಕ್ಷಿಯನ್ನು ದಿನಾಂಕ:16.06.2026 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ. ಟಿ ಜಿ ಟಿ ವಕೀಲರಿಂದಃ</u>**

ಪಿರ್ಯಾದುದಾರರು ನೀಡಿದ್ದ ನೋಟಿಸ್ ನನಗೆ ಖುದ್ದು ಜಾರಿಯಾಗಿದೆ ಎಂದರೆ ಸರಿಯಲ್ಲ. ನನಗೆ ಯಾವುದೇ ನೋಟಿಸ್ ಬಂದ ಬಗ್ಗೆ ಗಮನದಲ್ಲಿ ಇಲ್ಲ. ನ್ಯಾಯಾಲಯದ ಸಮನ್ಸ್ ನನಗೆ ಖುದ್ದು ಜಾರಿಯಾಗಿದೆ ಎಂದರೆ ಸರಿ. ನನ್ನ ಚೆಕ್ಕನ್ನು ದುಬರ್ಳಕೆ ಮಾಡಿಕೊಂಡಿದ್ದಾರೆ ಎಂದು ಪಿರ್ಯಾದುದಾರರ ವಿರುದ್ದ ದೂರು ದಾಖಲಿಸಿದ್ದೀರಾ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ಪ್ರಕರಣ ದಾಖಲಾದ ಕಾರಣ, ದಾಖಲಿಸಿಲ್ಲ ಎಂದು ನುಡಿಯುತ್ತಾರೆ.

2. ನಿಪಿ.1, 3 ಮತ್ತು 5 ರ ಚೆಕ್ಕುಗಳನ್ನು ನಾನು ಶೋಭಾ ರವರಿಗೆ ನೀಡಿದ್ದೆ. ನಿಡಿ.1 ಮತ್ತು 2 ರಲ್ಲಿ ನಿಪಿ.1, 3 ಮತ್ತು 5 ರ ಚೆಕ್ಕುಗಳನ್ನು ನಾನು ಶೋಭಾ ರವರಿಗೆ ನೀಡಿದ್ದೆ ಎಂದು ನಮೂದಾಗಿಲ್ಲ ಎಂದರೆ ಸರಿ. ನಿಪಿ.1, 3 ಮತ್ತು 5 ರ ಚೆಕ್ಕುಗಳಿಗೂ ಜಮೀನಿನ ವ್ಯವಹಾರಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಜಮೀನಿನ ವ್ಯವಹಾರ ಶೋಭಾ ಮತ್ತು ತ್ರಿವೇಣಿಯವರ ನಡುವೆ ಮಾಡಿದ್ದಾಗಿದ್ದು, ಸದರಿ ವ್ಯವಹಾರವನ್ನು ಜಗದೀಶ್ ಮತ್ತು ಅಶೋಕ್ ರವರು ಮಾಡಿಸಿರುತ್ತಾರೆ.

3. ನಿಪಿ.1, 3 ಮತ್ತು 5 ರ ಚೆಕ್ಕುಗಳನ್ನು ಶೋಭಾ ರವರಿಗೆ ನ್ಯಾಯಾಲಯದ ಬಳಿ ಶೋಭಾ ರವರು ಸಲ್ಲಿಸಿದ ದಾವೇ ವಾಪಸ್ ತೆಗೆದುಕೊಂಡ ದಿನವೇ ಜಗದೀಶ್ ಮತ್ತು ಅಶೋಕ್ ರವರ ಮಧ್ಯಸ್ಥಿಕೆಯಲ್ಲಿ ನೀಡಿದ್ದೆ. ಸದರಿ ಮೂರು ಚೆಕ್ಕುಗಳನ್ನು ರೂ.1 ಲಕ್ಷ ಬಾಕಿ ಉಳಿಸಿದ್ದ ಪೈಕಿ

ನೀಡಿರುತ್ತೇನೆ. ಶೋಭಾ ರವರು ದಾವೇಯನ್ನು ವಾಪಸ್ ಪಡೆದ ದಿನವೇ ರೂ. 9 ಲಕ್ಷ ಹಣವನ್ನು ಶೋಭಾ ರವರಿಗೆ ಜಗದೀಶ್ ಮತ್ತು ಅಶೋಕ್ ರವರ ಮಧ್ಯಸ್ಥಿಕೆಯಲ್ಲಿ ನೀಡಿದ್ದೆ. ಸದರಿ ರೂ. 9 ಲಕ್ಷ ಹಣವನ್ನು ಶೋಭಾ ರವರಿಗೆ ನಗದು ರೂಪದಲ್ಲಿ ನೀಡಿದ್ದೆ.

4. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ನಾನು ಜಮೀನು ಬಾಬ್ತು ರೂ.9 ಲಕ್ಷ ನೀಡಿರುತ್ತೇನೆ ಎಂದು ನನ್ನ ಆದಾಯ ತೆರಿಗೆಯಲ್ಲಿ ತೋರಿಸಿರುವುದಿಲ್ಲ. ಸದರಿ ಶೋಭಾ ರವರು ದಾವೇಯನ್ನು ವಾಪಸ್ ತೆಗೆದುಕೊಳ್ಳುತ್ತೇನೆ ಎಂದು ದಾವೇ ವಾಪಸ್ ಪಡೆದ ಕಾರಣ, ರೂ.9 ಲಕ್ಷ ಹಣವನ್ನು ನೀಡಿರುತ್ತೇನೆ. ಸದರಿ ಹಣವನ್ನು ದಾವೇಯಲ್ಲಿ ಬರೆಸಿ ಕೊಡಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ಶೋಭಾ ರವರ ಹೆಸರಿನಲ್ಲಿ ಖಾತೆ ಇರಲಿಲ್ಲ, ಅವರ ಕುಟುಂಬದ ನಡುವೆ ವಿವಾದ ಇದ್ದ ಕಾರಣ, ನ್ಯಾಯಾಲಯದ ಹೊರಗೆ ನಾನು ರಾಜೀ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳಿದ ರಾಜೀ ಮಾತುಕತೆ ದಾವೇ ಹಿಂಪಡೆಯುವ ಒಂದು ವಾರದ ಮುಂಚೆಯಾಗಿತ್ತು.

5. ನಿಡಿ.1ರ ಸಮಯದಲ್ಲೇ ಶೋಭಾ ರವರಿಗೆ ಹಣ ನೀಡಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ಶೋಭಾ ರವರು ದಾವೇ ವಾಪಸ್ ತೆಗೆದುಕೊಳ್ಳುವಾಗಲೇ ನೀಡಿ ಎಂದು ಹೇಳಿದ ಕಾರಣ, ಹಾಗೇ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ಶೋಭಾ ರವರು ಹೇಳಿದ ಬಗ್ಗೆ ನಿಡಿ.1ರಲ್ಲಿ ನಮೂದಾಗಿಲ್ಲ. ನಿಪಿ.2,4 ಮತ್ತು 6 ಸಾಕಷ್ಟು ಹಣ ಇಲ್ಲ ಎಂದು ವಾಪಸ್ ಬಂದಿರುತ್ತದೆ ವಿನಾಃ payment stopped ಎಂದು ಬಂದಿರುವುದಿಲ್ಲ ಎಂದರೆ ಸರಿ. ನಿಪಿ.1,3 ಮತ್ತು 5 ರ ಚೆಕ್ಕುಗಳಿಗೆ ನಾನು ದಿನಾಂಕ ಮತ್ತು ಹಣವನ್ನು ನಮೂದಿಸಿರುವುದಿಲ್ಲ.

ನಾನು ವಿದ್ಯಾವಂತನಿರುವ ಕಾರಣ, ಆ ರೀತಿ ಚೆಕ್ಕು ಭರ್ತಿ ಮಾಡದೇ ಕೊಡುವುದು ತಪ್ಪು ಎಂದು ನನಗೆ ಗೊತ್ತು ಎಂದರೆ ಸಾಕ್ಷಿಯು ಶೋಭಾ ರವರು ಮತ್ತು ಅವರ ಮನೆಯವರು ಹಂಚಿಕೊಳ್ಳಲಿ ಎಂದು ಆ ರೀತಿ ನೀಡಿದ್ದೆ ಎಂದು ನುಡಿಯುತ್ತಾರೆ.

6. ನಾನು ಶೋಭಾ ರವರೊಂದಿಗೆ ರಾಜೀ ಮಾಡಿಕೊಂಡಿರುತ್ತೇನೆ. ಶೋಭಾ ರವರು ತನ್ನ ಮನೆಯವರೆಲ್ಲರನ್ನು ಕರೆದುಕೊಂಡು ಬಂದು ರಾಜೀ ಮಾಡಿಕೊಂಡಿರುತ್ತಾರೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

**( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್